ಪ್ರಜ್ಞೆ ಕೂಡ ಅನೇಕ ಕಡೆ ರೈತರಿಗೆ ಇನ್ನೂ ಬಂದಿಲ್ಲ. ಈ ಯೂನಿಟ್ ಪ್ರಶ್ನೆ ಬಗೆ ಹರಿಯದೆ ಬೆಳೆವಿಮೆ ಮಾಡಿಸಿದರೆ, ನಾಳೆ ರೈತರಿಗೆ ಅನುಕೂಲವಾಗುವುದಿಲ್ಲ ಎನ್ನುವ ವಿಚಾರ ಕೂಡ ಇದೆ. ಆದ್ದರಿಂದ ಕೇಂದ್ರ ಸರ್ಕಾರಕ್ಕೆ ಒತ್ತಡತರಬೇಕೆನ್ನುವ ಅಭಿಪ್ರಾಯ ಕೂಡ ನಾವು ಇಟ್ಟು ಕೊಂಡಿದ್ದೇವೆ. ಅದರ ಬಗ್ಗೆ ನಾವು ಕಾರ್ಯಕ್ರಮ ಹಾಕಿಕೊಳ್ಳುತ್ತೇವೆ.

ಪ್ರಶ್ನೆ ಸಂಖ್ಯೆ ೪೮೫(೧೬೮೬) ಮಾನ್ಯ ಸದಸ್ಯರು ಸಭೆಯಲ್ಲಿ ಹಾಜರಿರಲಿಲ್ಲ.

ಸೂಪಾ ತಾಲ್ಲೂಕಿನಲ್ಲಿ ಕಪ್ಪು ಹಲಗೆ ಯೋಜನೆಯಡಿಯಲ್ಲಿ ಮಂಜೂರಾದ ಶಾಲೆಗಳ ಮತ್ತು ಕೊಠಡಿಗಳ ಸಂಖ್ಯೆ

೪೯೬(೧೪೪೩) ಶ್ರೀ ಪ್ರಭಾಕರ್ ಎಸ್. ರಾಣೆ. (ಕಾರವಾರ).—ಮಾನ್ಯ ಶಿಕ್ಷಣ, ಯುವಜನ ಸೇವೆ, ಕ್ರೀಡೆ ಕನ್ನಡ ಮತ್ತು ಸಂಸ್ಕೃತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ಸೂಪಾ ತಾಲ್ಲೂಕಿನಲ್ಲಿ ಕಪ್ಪು ಹಲಗೆ ಯೋಜನೆಯಡಿಯಲ್ಲಿ ಮಂಜೂರಾದ ಶಾಲೆಗಳ ಮತ್ತು ಕೊಠಡಿಗಳ ಸಂಖ್ಯೆ ಎಷ್ಟು ?

ಆ) ಇವುಗಳ ನಿರ್ಮಾಣ ಕಾರ್ಯ ಪೂರ್ಣಗೊಳ್ಳದಿರುವ ಹಾಗೂ ನಿರ್ಮಾಣ ಕಾರ್ಯ ಪ್ರಾರಂಭವಾಗದಿರುವ ಶಾಲೆಗಳ ಮತ್ತು ಕೊಠಡಿಗಳ ಸಂಖ್ಯೆ ಎಷ್ಟು ?

ಇ) ಈ ನಿರ್ಮಾಣ ಕೆಲಸವು ಕಳಪೆ ಕೆಲಸವಾಗಿರುವುದರ ಬಗ್ಗೆ ಸರ್ಕಾರಕ್ಕೆ ದೂರುಗಳು ಬಂದಿದೆಯೇ ?

ಈ) ಹಾಗದರೆ ಇದರ ಬಗ್ಗೆ ಕೈಗೊಂಡ ಕ್ರಮಗಳೇನು ?

ಶ್ರೀ ಕೆ. ಹೆಚ್. ರಂಗನಾಥ್ (ಶಿಕ್ಷಣ ಯುವಜನಸೇವೆ, ಕ್ರೀಡೆ, ಕನ್ನಡ ಮತ್ತು ಸಂಸ್ಕೃತಿ ಮಂತ್ರಿಗಳು).—

ಅ) ಸೂಪಾ ತಾಲ್ಲೂಕಿನಲ್ಲಿ ೭೫ ಶಾಲೆಗಳನ್ನು ಕಪ್ಪು ಹಲಗೆ ಯೋಜನೆಯಡಿಯಲ್ಲಿ ಆಳವಡಿಸಲಾಗಿದೆ ಮತ್ತು ೭೭ ಹೊಸ ಕೊಠಡಿಗಳನ್ನು ಕಟ್ಟಲು ಮಂಜೂರಾಗಿ ನೀಡಲಾಗಿದೆ.

ಆ) ನಿರ್ಮಾಣ ಪೂರ್ಣಗೊಂಡ ಕೊಠಡಿಗಳ ಸಂಖ್ಯೆ —೨೬
ಮುಕ್ತಾಯ ಹಂತದಲ್ಲಿರುವ ಕೊಠಡಿಗಳ ಸಂಖ್ಯೆ—೪೨
ಪ್ರಾರಂಭಿಸದೆಇರುವ ಕೊಠಡಿಗಳ ಸಂಖ್ಯೆ —೦೯

ಇ) ಇಲ್ಲ.

ಈ) ಉದ್ಭವಿಸುವುದಿಲ್ಲ

ಶ್ರೀ ಪ್ರಭಾಕರ್ ಎಸ್. ರಾಣೆ.— ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ಕಪ್ಪು ಹಲಗೆ ಯೋಜನೆಯಲ್ಲಿ ಸೂಪಾ ತಾಲ್ಲೂಕಿನಲ್ಲಿ ೭೫ ಹೊಸ ಕೊಠಡಿಗಳಲ್ಲಿ ಕೇವಲ ೨೬ ಕೊಠಡಿಗಳ ನಿರ್ಮಾಣ ಪೂರ್ತಿಯಾಗಿದೆ, ಮುಕ್ತಾಯ ಹಂತದಲ್ಲಿ ೪೨ ಕೊಠಡಿಗಳು ಇವೆ. ಇನ್ನೂ ೯ ಕೊಠಡಿಗಳ ಕಾರ್ಯ ಪ್ರಾರಂಭ ಮಾಡಿಲ್ಲವೆಂದು ಹೇಳಿದ್ದಾರೆ. ನಾನು ಒಂದು ಪ್ರಶ್ನೆ ಕೇಳುವುದೇನೆಂದರೆ, ಈ ಕೆಲಸ ಪ್ರಾರಂಭವಾದದ್ದು ಎಂದಿನಿಂದ ಅಥವಾ ಈ ಕೆಲಸಗಳನ್ನು ಕೈಗೆತ್ತಿಕೊಂಡದ್ದು ಯಾವಾಗ ? ಎಷ್ಟು ವರ್ಷವಾಯಿತು ? ನನಗೆ ತಿಳಿದ ಪ್ರಕಾರ ಸುಮಾರು ಎರಡು ವರ್ಷಕ್ಕೆ ಮೊದಲು ಈ ಕೆಲಸ ಪ್ರಾರಂಭಗೊಂಡಿದೆ. ಒಂದು ಕೊಠಡಿಗೆ ೩೦ ಸಾವಿರ ರೂಪಾಯಿ ವೆಚ್ಚ ಆಗುತ್ತದೆ. ಒಂದು ಹಳ್ಳಿಯಲ್ಲಿ ೩೦ ಸಾವಿರ ರೂಪಾಯಿಗಳನ್ನು ಖರ್ಚುಮಾಡಿ ಒಂದು ಕೊಠಡಿಯನ್ನು ನಿರ್ಮಾಣ ಮಾಡಲಿಕ್ಕೆ ಎಷ್ಟು ಕಾಲಾವಕಾಶ ಅಧಿಕಾರಿಗಳಿಗೆ ಅಥವಾ ಡಿಪಾರ್ಟ್‌ಮೆಂಟಿಗೆ ಬೇಕಾಗುತ್ತದೆ. ಎರಡು ವರ್ಷಗಳಾದರೂ ಸಹ ಶಿಕ್ಷಣ ಕ್ಷೇತ್ರದಲ್ಲಿ ಹಿಂದುಳಿದ ಪ್ರದೇಶಗಳಿಗೆ ವಿಶೇಷವಾದರೂ, ಈ ಸವಲತ್ತನ್ನು ಉಪಯೋಗಿಸಿಕೊಳ್ಳದೆ ವಿಫಲರಾದರೆ ಆ ಕಾರ್ಯಕ್ರಮವನ್ನು ಇಂಪ್ಲಿಮೆಂಟ್ ಮಾಡುವಂಥ ಅಧಿಕಾರಿಯ ಅದಕ್ಷತೆಯನ್ನು ತೋರಿಸುವುದಿಲ್ಲವೆ ? ಹಾಗಾದರೆ ಆ ಅಧಿಕಾರಿಗಳ ಮೇಲೆ ಯಾವ ಕ್ರಮ ತೆಗೆದುಕೊಳ್ಳುತ್ತೀರಾ? ಇನ್ನೊಂದು ಪ್ರಶ್ನೆ. ಈ ಕೊಠಡಿಗಳ ನಿರ್ಮಾಣದ ಕೆಲಸ ಕಳಪೆಯಾಗಿದೆ ಎಂಬುದರ ಬಗ್ಗೆ ಸರ್ಕಾರ

ಗಮನಕ್ಕೆ ಬಂದಿದೆಯೇ ಎಂದರೆ, ಇಲ್ಲವೆಂದು ಹೇಳಿದ್ದಾರೆ. ನನ್ನ ಪ್ರಕಾರ ಮಾನ್ಯ ಸಚಿವರಿಗೆ ಅಧಿಕಾರಿಗಳು ಸರಿಯಾದ ಮಾಹಿತಿಯನ್ನು ನೀಡಲಿಲ್ಲವೆಂದು ಅನಿಸುತ್ತದೆ. ಈ ಕೆಲಸದಬಗ್ಗೆ ದೂರನ್ನು ತಾಲ್ಲೂಕು ಪಂಚಾಯಿತಿ ಸಮಿತಿಯಿಂದ, ಹಿಡಿದು ಜಿಲ್ಲಾಪರಿಷತ್ತಿನಿಂದ ಹಿಡಿದು ನಮ್ಮ ಸರ್ಕಾರದ ಮುಖ್ಯ ಕಾರ್ಯದರ್ಶಿಯವರಿಗೂ ದೂರು ಬಂದಿದೆ. ನಾನೇ ಲಿಖಿತವಾಗಿ ಈ ಹಿಂದೆ ದೂರು ಕೊಟ್ಟಿದ್ದೇನೆ. ಕಳೆದ ಎರಡು ವರ್ಷಗಳಿಂದಲೂ ದೂರುಗಳನ್ನು ಕೊಡುತ್ತಿದ್ದೇವೆ. ಹಿಂದಿನ ಸರ್ಕಾರ ಇದ್ದಾಗಲೂ ಕೊಟ್ಟಿದ್ದೇನೆ. ರಾಜ್ಯಪಾಲರ ಆಡಳಿತದ ಕಾಲದಲ್ಲೂ ಸ್ವತಃ ರಾಜ್ಯಪಾಲರ ಹತ್ತಿರ ಆ ದೂರನ್ನು ಕೊಡಲಾಗಿದೆ. ರಾಜ್ಯಪಾಲರ ಕಾರ್ಯದರ್ಶಿಯವರಿಂದ ನಮಗೆ ಉತ್ತರಬಂದಿದೆ. ದೂರನ್ನು ಸಂಬಂಧಪಟ್ಟ ಇಲಾಖೆಗೆ ಕಳುಹಿಸಿಕೊಟ್ಟಿದ್ದೇವೆ, ಅದರ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುತ್ತಾರೆಂದು ತಿಳಿಸಲಾಗಿತ್ತು. ನಾನು ವಿಶಾದದಿಂದ ಹೇಳಬೇಕಾಗಿದೆ. ಇವತ್ತಿನವರೆಗೂ ಆ ಅಧಿಕಾರಿಗಳ ಮೇಲೆ ಯಾವುದೇ ಕ್ರಮವನ್ನೂ ಕೈಗೊಂಡಿಲ್ಲ. ಇನ್ನು ಮೇಲಾದರೂ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳುತ್ತೀರಾ ? ಇನ್ನು ಮೂರನೆಯದಾಗಿ ಇಲ್ಲಿ ಏನಾಗಿದೆ ಎಂದರೆ, ಜಿಲ್ಲಾಪರಿಷತ್ತಿನ ವ್ಯಾಪ್ತಿಯಲ್ಲಿ ಈ ಕೆಲಸ ಬರುತ್ತಿರುವುದರಿಂದ ಜಿಲ್ಲಾಪರಿಷತ್ತಿನವರು ಅದನ್ನು ಚಿಲ್ಲರೆ ರಾಜಕೀಯ ಮಾಡಿ ನನ್ನ ಕ್ಷೇತ್ರದಲ್ಲಿ ಅಭಿವೃದ್ಧಿ ಕೆಲಸವಾಗುತ್ತದೆಂದು ಹೇಳಿ ದುಷ್ಟ ದೂರಾಲೋಚನೆಯಿಂದ, ಭ್ರಷ್ಟಾಚಾರ ಮಾಡಿದಂಥ ಅಧಿಕಾರಿಗಳಿಗೆ ರಕ್ಷಣೆ ಕೊಡುತ್ತಿದ್ದಾರೆ. ಈ ವಿಷಯವನ್ನು ಜಿಲ್ಲಾ ಪರಿಷತ್ತಿನಲ್ಲೂ ಪ್ರಸ್ತಾಪ ಮಾಡಿ ಗಲಾಟೆ ಮಾಡಿದರೂ ಇವತ್ತಿನವರೆಗೂ ಅವರುಗಳ ಮೇಲೆ ಯಾವ ಕಾರ್ಯಕ್ರಮವನ್ನೂ ಕೈಗೊಂಡಿಲ್ಲ. ಇನ್ನೂ ಒಂದು ಪ್ರಶ್ನೆ ಕೇಳುವುದೇನೆಂದರೆ, ಶಿಕ್ಷಣ ಕ್ಷೇತ್ರದಲ್ಲಿ ಚಿಲ್ಲಾಪರಿಷತ್ತಿನವರು ಚಿಲ್ಲರೆ ರಾಜಕೀಯವನ್ನೂ ಮಾಡುತ್ತಿರುವುದರಿಂದ ಶಿಕ್ಷಣಕ್ಷೇತ್ರವನ್ನು ಅವರ ವ್ಯಾಪ್ತಿಯಿಂದ ದೂರ ಮಾಡುತ್ತೀರೋ ಹೇಗೆ ಎಂದು ಕೇಳುತ್ತೇನೆ.

ಶ್ರೀ ಕೆ. ಹೆಚ್. ರಂಗನಾಥ್.—ಮಾನ್ಯ ಅಧ್ಯಕ್ಷರೇ, ಉತ್ತರವನ್ನೂ ಅವರೇ ಹೇಳಿಬಿಟ್ಟಿದ್ದಾರೆ, ಮಾನ್ಯ ಸದಸ್ಯರೇ ಸ್ವತಃ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದಾರೆ, ನಮ್ಮ ಸರ್ಕಾರದ ಕಡತದಲ್ಲಿ ಅದರಬಗ್ಗೆ ಮಾಹಿತಿ ಇಲ್ಲ. ಇದನ್ನು ನಾನುಗಮನಿಸುತ್ತೇನೆ. ಈ ಬಗ್ಗೆ ಸೂಕ್ತಕ್ರಮತೆಗೆದುಕೊಳ್ಳುತ್ತೇನೆ. ಇವನ್ನು ಯಾವುದೇ ಅಧಿಕಾರಿ ಮಾಡುವುದಿಲ್ಲ. ಈ ಕೆಲಸವನ್ನು ಜಿಲ್ಲಾ ಪರಿಷತ್ತುಗಳಿಗೆ ವಹಿಸಿಕೊಟ್ಟಿದ್ದೇವೆ. ಕಪ್ಪು ಹೇಗೆ ಕಾರ್ಯಕ್ರಮದಲ್ಲಿ ರಾಜ್ಯಾದ್ಯಂತ ಒಂದು ದೊಡ್ಡ ಯೋಜನೆಯನ್ನು ಹಾಕಿಕೊಂಡಾಗಿದೆ. ಮೊದಲನೇ ಹಂತ, ಎರಡನೇ ಹಂತ, ಮತ್ತು ಮೂರನೇ ಹಂತದಲ್ಲಿ ಈ ಕೆಲಸವನ್ನು ಜಿಲ್ಲಾಪರಿಷತ್ತುಗಳಿಗೆ ವಹಿಸಿಕೊಟ್ಟಾಗಿದೆ. ಮೊದಲನೇ ಹಂತದಲ್ಲಿ ಸ್ವಲ್ಪ ಕೆಲಸ ಆಗಿದೆ. ಆದರೆ ಎರಡನೇ ಹಂತದಲ್ಲಿ ನಾವು ನಿರೀಕ್ಷೆ ಮಾಡಿದಷ್ಟು ಕೆಲಸವಾಗಿಲ್ಲ ಬಹಳ ಮಟ್ಟಿಗೆ ಸಭೆಯ ಗಮನಕ್ಕೆ ತರುವುದಾದರೆ, ಇನ್ನೂ ಸುಮಾರು ೧೧,೭೨೨ ಕೊಠಡಿಗಳನ್ನು ಜಿಲ್ಲಾ ಪರಿಷತ್‌ನವರು ಕಟ್ಟಬೇಕಾಗಿದೆ. ಈಗ ಕೇವಲ ೨,೩೮೧ ಕೊಠಡಿಗಳು ಮಾತ್ರ ಪೂರ್ತಿಯಾಗಿವೆ. ಸುಮಾರು ೧೦ ಕೋಟಿ ರೂಪಾಯಿಯಷ್ಟು ಹಣ ಇದಕ್ಕೆ ಬಿಡುಗಡೆಯಾಗಿದೆ. ಇದನ್ನು ಅಧಿಕಾರಿಗಳ ಮುಖಾಂತರ ಮಾಡಿಸಲಿಲ್ಲ. ಇದರ ಪೂರ್ಣ ಜವಾಬ್ದಾರಿಯನ್ನು ಜಿಲ್ಲಾಪರಿಷತ್ತಿಗೆ ವಹಿಸಿದ್ದರೂ ಕಾರಣಾಂತರದಿಂದ ಜಿಲ್ಲಾಪರಿಷತ್ತಿನವರು ಇದನ್ನು ಮಾಡಿ ಮುಗಿಸತಕ್ಕ ವ್ಯವಸ್ಥೆ ಏನು ಮಾಡಿ ಕೊಂಡಿದ್ದಾರೋ ಗೊತ್ತಿಲ್ಲ. ಮೊನ್ನೆ ನಾವು ಜಿಲ್ಲಾಪರಿಷತ್ತಿನ ಅಧ್ಯಕ್ಷರ ಸಭೆಯನ್ನು ಕೂಡ ಕರೆದಿದ್ದೆವು. ನಮ್ಮ ಇಲಾಖೆಯ ನಿಲಸಕಾರ್ಯಗಳ ಬಗ್ಗೆ ಚರ್ಚಿಸಲು ಈ ಸಭೆಯನ್ನು ಕರೆಯಲಾಗಿತ್ತು. ಅಲ್ಲೂ ಕೂಡ ಇದು ಪ್ರಸ್ತಾಪವಾಗಿದೆ. ಮಾನ್ಯ ಸದಸ್ಯರು ಏನು ಪ್ರಸ್ತಾಪ ಮಾಡಿದ್ದಾರೆ, ಆದರ ಗುಣ ಮಟ್ಟ ಚೆನ್ನಾಗಿಲ್ಲ, ಅದಕ್ಕಾಗಿ ಅವರ ಬಗ್ಗೆ ಆಪಾದನೆಗಳು ಬಂದಿದೆ ಎಂದು, ಅದನ್ನು ನಾನು ಪರೀಕ್ಷೆ ಮಾಡಿಸುತ್ತೇನೆ.

ಶ್ರೀ ಪ್ರಭಾಕರ್ ಎಸ್. ರಾಣೆ.—ಈ ಕೆಲಸದ ಗುಣಮಟ್ಟದ ಬಗ್ಗೆ ನಾನು ಕೇವಲ ಯಾವುದೋ ಒಂದು ಉದ್ದೇಶವನ್ನು ಇಟ್ಟುಕೊಂಡು ಮಾಡಿದ್ದಲ್ಲ. ನಿರ್ದಿಷ್ಟವಾಗಿ ಅಲ್ಲಿ ಯಾವರೀತಿ ಕಳಪೆ ಕೆಲಸ ಆಗಿದೆಯೆಂಬುದನ್ನು ಉದಾಹರಣೆಗೆ ಸಹಿತ ದೂರು ಕೊಟ್ಟಿದ್ದೇನೆ. ನನಗನಿಸುತ್ತದೆ ಆ ಅಧಿಕಾರಿ ಶಿಕ್ಷಣ ವ್ಯಾಪ್ತಿಯಲ್ಲಿ ಬರದೇ ಇರುವುದರಿಂದ, ಈ ನನ್ನ ದೂರು ಶಿಕ್ಷಣ ಇಲಾಖೆಗೆ ಬಂದಿಲ್ಲ. ಅದು ಜಿಲ್ಲಾಪರಿಷತ್ತಿನ ಉಪವಿಭಾಗದ ಇಂಜಿನಿಯರ್ ಮಾಡುವಂತಹ ಕೆಲಸ, ಅದು ಏನೇ ಇರಲಿ, ಇಲ್ಲಿ ಯಾವರೀತಿ ಕಳಪೆ ಕೆಲಸ ಆಗಿದೆ, ಹಾಗೂ ದುರ್ವ್ಯವಹಾರ ಆಗಿದೆ, ಅದರ ಬಗ್ಗೆ ತಾವು ತನಿಖೆ ಮಾಡಿಸಬೇಕು.

ಸಭಾಧ್ಯಕ್ಷರು.—ಅದನ್ನು ನೋಡಿಸುತ್ತೇವೆಂದು ಹೇಳಿದ್ದಾರೆ ಬಿಡಿ.

ಶ್ರೀ ಪ್ರಭಾಕರ್ ಎಸ್. ರಾಣೆ.—ನನ್ನ ಇನ್ನೊಂದು ಪ್ರಶ್ನೆ ಏನೆಂದರೆ.....

MR. SPEAKER.—You have to elicit information from the Minister. You are supplying him with the information. There are other ways where an MLA, an Hon'ble Member of this House can get these things rectified.

ಶ್ರೀ ಪ್ರಭಾಕರ್ ಎಸ್. ರಾಣೆ.—ಶಿಕ್ಷಣ ಇಲಾಖೆಯನ್ನು ಜಿಲ್ಲಾ ಪರಿಷತ್ತಿನಿಂದ ಬೇರ್ಪಡಿಸಲು ಕ್ರಮ ಕೈಗೊಳ್ಳುತ್ತೀರಾ ?

ಶ್ರೀ ಕೆ. ಹೆಚ್. ರಂಗನಾಥ್.—ಇದರ ಬಗ್ಗೆ ವ್ಯಾಪಕವಾಗಿ ಚರ್ಚೆಯಾಗುತ್ತಿದೆ. ಶಿಕ್ಷಣ ಇಲಾಖೆಯ ಸಂಘ ಸಂಸ್ಥೆಗಳವರು ಇದನ್ನು ಪ್ರಸ್ತಾಪ ಮಾಡಿದ್ದಾರೆ. ಸಾರ್ವಜನಿಕರೂ ಸಹ ಇದನ್ನು ಪ್ರಸ್ತಾಪ ಮಾಡಿದ್ದಾರೆ. ಈ ಮಧ್ಯೆ ನಾನು ನಿನ್ನೆ ಪತ್ರಿಕೆಯಲ್ಲಿ ಬಂದಿರುವುದನ್ನು ನೋಡಿದೆ, ನಮ್ಮ ಅಧಿಕಾರದಲ್ಲಿ ಹಸ್ತಕ್ಷೇಪ ಮಾಡುತ್ತಿದ್ದಾರೆಂದು ಜಿಲ್ಲಾ ಪರಿಷತ್ತಿನ ಅಧ್ಯಕ್ಷರು ಬೇರೆ ಪ್ರಸ್ತಾಪ ಮಾಡಿದ್ದಾರೆ. ಈ ಗೊಂದಲದಲ್ಲಿ ನಾವು ಸಿಕ್ಕಿಹಾಕಿಕೊಂಡಿದ್ದೇವೆ. ಅಧಿಕಾರ ಕೊಡುವಾಗ ಅವಸರದಲ್ಲಿ ಎಲ್ಲಿ ಕೊಟ್ಟಿದ್ದಾರೆ. ನನ್ನ ಅಧಿಕಾರಿಗಳಿಗೂ ಕೂಡ ಒಂದು ತೊಂದರೆಯಾಗಿದೆ. ೧೯೭೮ ರಲ್ಲಿ ಯಾವ್ಯಾವ ಅಧಿಕಾರಿಗೆ ಏನೇನು ಅಧಿಕಾರ ಇತ್ತೆಂಬುದನ್ನು ಕಾನೂನಿನಲ್ಲಿ ಹೇಳಿದ್ದೇವೆ, ಡೆಪ್ಯೂಟಿ ಡೈರೆಕ್ಟರಿಗೆ ಏನೂ ಅಧಿಕಾರ ಇದೆ, ಅವನ ವ್ಯಾಪ್ತಿ ಏನು ಅವನ ಏನು ಕೆಲಸ ಮಾಡಬಹುದು, ಎಜ್ಯುಕೇಷನ್ ಆಫೀಸರ್ ಏನು ಕೆಲಸ ಮಾಡಬೇಕು, ಅಸಿಸ್ಟೆಂಟ್ ಎಜುಕೇಷನ್ ಆಫೀಸರ್ ಏನು ಕೆಲಸ ಮಾಡಬೇಕು, ಹಾಗೆಯೇ ಜಾಯಿಂಟ್ ಡೈರೆಕ್ಟರ್ ಅವರು ಏನೂ ಕೆಲಸ ಮಾಡಬೇಕು ಎಂಬುದನ್ನೆಲ್ಲಾ ತಿಳಿಸಲಾಗಿತ್ತು. ಈ ಎಲ್ಲ ಅಧಿಕಾರವೂ ಈಗ ಹಾಗೆಯೇ ಇದೆ. ಆದರೆ ಈಗ ಮಾನ್ಯ ಸದಸ್ಯರು ಜಿಲ್ಲಾಪರಿಷತ್ತಿನವರು ಸರಿಯಾಗಿ ಕೆಲಸ ಮಾಡುತ್ತಿಲ್ಲ, ವರ್ಗ ಮಾಡಿ ಎಂದರೆ ''ನೀವು ಯಾರು'' ಎಂದು ಕೇಳುತ್ತಾರೆಂದು ಹೇಳುತ್ತಿದ್ದಾರೆ. ಈ ಗೊಂದಲ ಇದೆ. ಹೀಗೆ ನಾವು ತೂಬಕಿನಲ್ಲಿ ಸಿಕ್ಕಿಹಾಕಿಕೊಂಡಿದ್ದೇವೆ. ಮಾನ್ಯ ಸದಸ್ಯರ ಅಭಿಪ್ರಾಯ ಇದನ್ನು ಬೇರೆ ಮಾಡಬೇಕು ಎಂದಿದ್ದರೆ, ಅದು ಸರ್ಕಾರ ತೀರ್ಮಾನ ತೆಗೆದುಕೊಳ್ಳತಕ್ಕ ವಿಚಾರವಾಗಿದೆ. ಅಲ್ಲಿಗೆ ನಾನು ಅದನ್ನು ಬಿಡುತ್ತೇನೆ. ಬಹುಮಟ್ಟಿಗೆ ಕೆಲಸ ಸರಿಯಾಗಿ ಆಗುತ್ತಿಲ್ಲವೆಂಬ ಅಭಿಪ್ರಾಯ ಈ ಸದನದ ಸದಸ್ಯರಿಗೆ ಮತ್ತು ಸರ್ಕಾರದ ಗಮನಕ್ಕೆ ಬರುವುದಾದರೆ ಮುಂದಿನಕಾರ್ಯಕ್ರಮವನ್ನು ಸರ್ಕಾರ ತೆಗೆದುಕೊಳ್ಳಬೇಕಾಗುತ್ತದೆ.

ಪದವಿಪೂರ್ವ ಪರೀಕ್ಷೆಗಳ ಉತ್ತರ ಪತ್ರಿಕೆಗಳ ಮರು ಮೌಲ್ಯ ಮಾಪನದ ಬಗ್ಗೆ

೪೮೭ (೧೩೬೩) ಶ್ರೀ ಪೆರಿಕಲ್ ಮಲ್ಲಪ್ಪ (ಚಿಕ್ಕಮೇಟಿ).—ಮಾನ್ಯ ಶಿಕ್ಷಣ, ಯುವಜನ ಸೇವೆ, ಕ್ರೀಡೆ, ಕನ್ನಡ ಮತ್ತು ಸಂಸ್ಕೃತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ:—

ಅ) ದ್ವಿತೀಯ ಪಿ.ಯು.ಸಿ. ರಿಪೇಕ್ಷೆಯಂ ಉತ್ತರ ಪತ್ರಿಕೆಗಳನ್ನು ಪುನರ್ ಮೌಲ್ಯಮಾಪನ ಮಾಡಿಸಲು ಅವಕಾಶವಿದೆಯೇ ?

ಆ) ಇಲ್ಲದಿದ್ದಲ್ಲಿ, ಸರ್ಕಾರ ಪುನರ್ ಮೌಲ್ಯಮಾಪನಕ್ಕೆ ಕ್ರಮ ಕೈಗೊಂಡು ವಿದ್ಯಾರ್ಥಿಗಳಿಗೆ ನ್ಯಾಯ ದೊರಕಿಸುವುದೇ ?

ಶ್ರೀ ಕೆ. ಹೆಚ್. ರಂಗನಾಥ್ (ಶಿಕ್ಷಣ ಯುವಜನ ಸೇವೆ, ಕ್ರೀಡೆ, ಕನ್ನಡ ಮತ್ತು ಸಂಸ್ಕೃತಿ ಮಂತ್ರಿಗಳು).—

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಶ್ರೀ ಪೆರಿಕಲ್ ಮಲ್ಲಪ್ಪ.—ಪಿ.ಯು.ಸಿ. ಬೋರ್ಡ್‌ನವರು ದ್ವಿತೀಯ ಪಿ.ಯು.ಸಿ. ಪರೀಕ್ಷೆಗಳನ್ನು ನಡೆಸುತ್ತಾರೆ. ಆದರೆ ಈ ಪರೀಕ್ಷೆಗಳ ಉತ್ತರ ಪತ್ರಿಕೆಗಳನ್ನು ರೀವ್ಯಾಲ್ಯುವೇಷನ್ ಮಾಡಲು